





# ಕಸವರಳಿ ಹೂವಾಗಿ..!

ನಾವೆಲ್ಲ ಕಸ, ನಿಷ್ಪ್ರಯೋಜಕ ವಸ್ತುಗಳೆಂದುಕೊಂಡು ಎಸೆಯುವ ವಸ್ತುಗಳು ಲೀಲಾವತಿ ಅವರ ಕೈಯಲ್ಲಿ ಹೂವಾಗಿ ಅರಳುತ್ತವೆ. ಹೂಗೊಂಚಲಾಗಿ ಅರಳಿ ಹೂದಾನಿಯನ್ನು ಸೇರುತ್ತದೆ.

★ ಅನೂಷಾ ಹೊನ್ನೇಕೂಲು

ಮನೆಯಲ್ಲಿರುವ ನಿರುಪಯೋಗವಾದ ಹಳೆಯ ಆಮಂತ್ರಣ ಪತ್ರಿಕೆಗಳು, ಕಸವಾಗಿ ಎಸೆಯಲ್ಪಡುವ ಕೆಲವು ಸಾಧನಗಳನ್ನು ಬಳಸಿ ಉತ್ತಮ ಕರಕುಶಲ ವಸ್ತುಗಳನ್ನು ತಯಾರಿಸಿ ಮನೆಯನ್ನು ಅಲಂಕರಿಸ ಬಹುದಾಗಿದೆ. ಸೃಜನಶೀಲ ಮನಸ್ಸು, ಕಸವನ್ನು ಹೂವಾಗಿಸುವ ಆಸಕ್ತಿ ಇದ್ದರೆ ಎಂತಹ ಕಸವನ್ನೂ ಸುಂದರ ಸಂಗ್ರಹಯೋಗ್ಯ ಕಲಾಕೃತಿಯಾಗಿ ಅರಳಿಸ ಬಹುದು ಎಂಬುದಕ್ಕೆ ನಿದರ್ಶನರಾಗಿದ್ದಾರೆ ವಿಟ್ಲ ಸಮೀಪದ ಉಕ್ಕುಡದ ಗೃಹಿಣಿ ಲೀಲಾವತಿ ಎಸ್.

ಕರಕುಶಲ ತಯಾರಿಕೆಗಳು ಲೀಲಾವತಿಯವರಿಗೆ ಸಿದ್ಧಹಸ್ತ. ಸದಾ ಕ್ರಿಯಾ ಶೀಲರಾಗಿ ಬಿಡುವಿನ ವೇಳೆಯಲ್ಲಿ ಕರಕುಶಲ ವಸ್ತುಗಳನ್ನು ತಯಾರಿಸುವುದು ಅವರ ನೆಚ್ಚಿನ ಹವ್ಯಾಸ. ನಾವೆಲ್ಲ ಕಸ, ನಿಷ್ಪ್ರಯೋಜಕ ವಸ್ತುಗಳೆಂದುಕೊಂಡು ಎಸೆಯುವ ವಸ್ತುಗಳು ಇವರ ಕೈಯಲ್ಲಿ ಹೂವಾಗಿ ಅರಳುತ್ತವೆ. ಜೋಳ ತಿಂದು ಬಿಸಾಡುವ ಸಿಪ್ಪೆಯು ಲೀಲಾವತಿ ಅವರ ಕೈಚಳಕದಿಂದ ಸುಂದರವಾದ ಹೂಗೊಂಚಲಾಗಿ ಅರಳಿ ಹೂದಾನಿಯನ್ನು ಸೇರುತ್ತದೆ. ನಿರುಪಯುಕ್ತವಾದ, ಹಾಳಾದ ಎಲ್‌ಇಡಿ ಬಲ್ಬ್‌ಗಳು ಮತ್ತೊಂದು ರೂಪ ಪಡೆದು ಆಕರ್ಷಕ ಕಲಾಕೃತಿಯಾಗಿ ಮನೆಯ ಶೋಕೇಸನ್ನು ಅಲಂಕರಿಸುತ್ತವೆ. ಹಳೆಯ ಸೀರೆಗಳು ಮತ್ತು ನೈಟಿಗಳು ಆಕರ್ಷಕ ಕಾಲೊರೆಸಾಗಿ(ಡೋರ್ ಮ್ಯಾಟ್) ಮಾರ್ಪಾಟಾಗಿ ಉಪಯೋಗಕ್ಕೆ ಬರುತ್ತವೆ.



ಕರಕುಶಲ ನಿಪುಣೆ ಲೀಲಾವತಿ

ಯಾವಾಗಲೂ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಸಮಯವನ್ನು ಸದುಪಯೋಗಪಡಿಸುವ ಲೀಲಾವತಿ ಅವರಿಗೆ ಟೀವಿ, ಕಾಡು ಹರಟೆ ಎಂದರೆ ಬಹು ದೂರ. ಕರಕುಶಲ ವಸ್ತುಗಳನ್ನು ತಯಾರಿಸಿ ಮನೆ ಯನ್ನು ಅಲಂಕರಿಸುವುದು, ತೋಟಗಾರಿಕೆ, ಕಥೆ, ಕಾದಂಬರಿ ಪುಸ್ತಕಗಳು, ದಿನಪತ್ರಿಕೆಗಳನ್ನು ಓದುವುದು, ಜತೆಗೆ ಸಂಗ್ರಹಯೋಗ್ಯ ಲೇಖನಗಳನ್ನು ಜತನ ದಿಂದ ಕಾಪಾಡುವುದು, ಪತ್ರಿಕೆಗಳಲ್ಲಿ ಪ್ರಕಟಗೊಂಡ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಉತ್ತರ ಪತ್ರಿಕೆಗಳನ್ನು ಸಂಗ್ರಹಿಸಿಡುವುದು ಅವರ ಮತ್ತೊಂದು ಹವ್ಯಾಸ.

ಅವರ ಮನೆಗೆ ಅಡಿಯಿಡುತ್ತಿದ್ದಂತೆ ಹಾಲ್‌ನಿಂದ ಅಡುಗೆ ಮನೆಯವರೆಗೂ ಅಲಂಕರಿಸಿರುವ ಬಗೆ ಬಗೆಯ ಕಲಾಕೃತಿಗಳು ನಮ್ಮನ್ನು ಮೋಡಿ ಮಾಡುತ್ತವೆ. ಅಡಿಕೆ ಹಾಳೆಯಿಂದ ಚೆಂದದ ಹೂವುಗಳನ್ನು ತಯಾರಿಸಿ ಬಣ್ಣ ಹಚ್ಚಿ ಚಿತ್ತಾಕರ್ಷಕ ಕಲಾಕೃತಿಯನ್ನಾಗಿಸಿದ್ದಾರೆ. ವೃತ್ತ ಪತ್ರಿಕೆಗಳಿಂದ ಚೆಂದದ ಪೆನ್‌ಸ್ಟ್ಯಾಂಡ್ ತಯಾರಿಸಿದ್ದಾರೆ. ಎಲ್ಲವೂ ಒಂದಕ್ಕಿಂತ ಒಂದು ಅಂದವಾಗಿದ್ದು ಆಕರ್ಷಣೀಯವಾಗಿವೆ. ಯಾವುದನ್ನು ಮಾರುಕಟ್ಟೆಯಿಂದ ತಂದದ್ದಲ್ಲ. ಎಲ್ಲವೂ ಅವರ ಸೃಜನಶೀಲತೆಗೆ ಸಾಕ್ಷಿಯಾಗಿ ಕೈಯಲ್ಲಿ ಅರಳಿ ನಿಂತ ಅಂದ ಚೆಂದದ ಕಲಾಕೃತಿಗಳವು.

ನೀರು ಕುಡಿದು ಕಸದ ಬುಟ್ಟಿ ಸೇರುವ ತೆಳುವಾದ ನೀರಿನ ಬಾಟಲಿಗಳನ್ನು ಬ್ಲೇಡಿನಿಂದ ನೀಟಾಗಿ ಕತ್ತರಿಸಿ ಹೂವಾಗಿ ಅರಳಿಸಿ ಬಣ್ಣ ಹಚ್ಚಿ ಸುಂದರವಾದ ಹೂದಾನಿಯನ್ನಾಗಿಸಿದ್ದಾರೆ. ಭಿತ್ತಿಪತ್ರಗಳು, ಹಳೆ ಕ್ಯಾಲೆಂಡರ್ ಮುಂತಾದ ರದ್ದಿಗೆ ಹಾಕುವ ಕಾಗದದಿಂದ ಅಲಂಕಾರಿಕ ಸರಗಳು ಮತ್ತು ಓಲೆಗಳನ್ನು ತಯಾರಿಸುತ್ತಾರೆ. ಹಳೆಯ ಗಾಜಿನ ಬಾಟಲಿಗೆ ದಿನಪತ್ರಿಕೆಯ ರೋಲ್‌ಗಳನ್ನು ಮಾಡಿ ಅಂಟಿಸಿ ಅದರಲ್ಲಿ ಮನಿ ಪ್ಲಾಂಟ್ ಮುಂತಾದ ಅಲಂಕಾರಿಕ ಸಸ್ಯಗಳನ್ನು ಇರಿಸಿ ಮನೆಯ ಅಂದವನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

ಉಲ್ಲನ್‌ನಿಂದ ಕ್ರೋಶಾ, ನಿಟ್ಟಿಂಗ್ ವರ್ಕ್ ಮಾಡುವುದರಲ್ಲೂ ನಿಸ್ಸೀಮರು. 'ಮಗ ಶಾಲೆಗೆ ಸೇರಿದ ನಂತರ ಬಿಡುವಿನ ವೇಳೆಯಲ್ಲಿ ಕ್ರೋಶಾ, ನಿಟ್ಟಿಂಗ್ ಮಾಡುವುದನ್ನು ಕಲಿತೆ. ಮನೆ ಕೆಲಸದ ಬಳಿಕ ಸುಮ್ಮನೇ ಕುಳಿತು ಸಮಯ ಹಾಳು ಮಾಡುವ ಬದಲು ಇಂತಹ ಕಲಾಕೃತಿಗಳನ್ನು ಮಾಡಿ ಮನೆಯನ್ನು ಅಲಂಕರಿಸಲು ಪ್ರಾರಂಭಿಸಿದೆ' ಎನ್ನುತ್ತಾರೆ ಲೀಲಾವತಿ.

ಫ್ಯಾನ್ಸಿ ಬಳೆ, ಸರಗಳನ್ನು ತಯಾರಿಸುವುದು ಕೂಡ ಅವರಿಗೆ ತಿಳಿದಿದೆ. ಥ್ರೆಡ್‌ನಿಂದ ಆಕರ್ಷಕ ಬಳೆಗಳು, ಸಿಲ್ಕ್ ಥ್ರೆಡ್‌ನಿದ ಜುಮ್ಕಿ ಇತ್ಯಾದಿ ತಯಾರಿಸುತ್ತಾರೆ. ಅಲ್ಲದೆ ಥ್ರೆಡ್‌ಗಳನ್ನು ಬಳಸಿ ಚೆಂದದ ವ್ಯಾನಿಟಿ ಬ್ಯಾಗ್ ಹೊಲಿಯುತ್ತಾರೆ. ಇತ್ತೀಚೆಗೆ ತೆಂಗಿನ ಚಿಪ್ಪಿನಿಂದ ಕಲಾಕೃತಿಗಳನ್ನು ಮಾಡುವುದನ್ನು ಕಲಿತಿದ್ದು ಗೊಂಬೆಯೊಂದನ್ನು ರಚಿಸಿದ್ದಾರೆ. ತಾವು ಮಾಡುವ ಕಲಾ ಚಟುವಟಿಕೆಗಳಿಗೆ ಪತಿ ಶೇಷು (ಬಿಎಸ್‌ಎನ್‌ಎಲ್ ಉದ್ಯೋಗಿ) ಮತ್ತು ಪುತ್ರ ಚೇತನ್ ಕುಮಾರ್(ಎಂಟೆಕ್ ವಿದ್ಯಾರ್ಥಿ) ಅವರ ಪ್ರೋತ್ಸಾಹ ಇದೆ. ಕಲಾಕೃತಿಗಳಿಗೆ ಪೈಂಟಿಂಗ್ ಮಾಡುವಾಗ ಬಣ್ಣಗಳ ಸಂಯೋಜನೆ ಬಗ್ಗೆ ಪುತ್ರ ಚೇತನ್ ಸಲಹೆ ನೀಡುತ್ತಾನೆ ಎನ್ನುತ್ತಾರೆ ಇವರು.

ಜಲ ಜಾಗೃತಿ

ನೀರಿನ ಉಳಿತಾಯ, ಮಳೆ ನೀರು ಇಂಗಿಸುವ ಬಗ್ಗೆ ಲೀಲಾವತಿಯವರು ತೀವ್ರ ಕಾಳಜಿ ಹೊಂದಿದ್ದು ಕಳೆದ ಮಳೆಗಾಲದಲ್ಲಿ ಮಳೆ ನೀರು ಕೊಯ್ಲು ಮಾಡಿದ್ದಾರೆ. ಮನೆಯ ಟೆರೇಸಿನ ನೀರನ್ನು ಚರಂಡಿಗೆ ಹರಿಯಲು ಬಿಡದೆ ಎರಡು ಟ್ಯಾಂಕ್‌ಗಳಲ್ಲಿ ಸಂಗ್ರಹಿಸಿ ಪೈಪ್ ಮೂಲಕ ಕುಡಿಯುವ ನೀರಿನ ಬಾವಿಗೆ ಬಿಟ್ಟಿದ್ದಾರೆ. ಇದರ ಪರಿಣಾಮ ಕಳೆದ ಕೆಲ ವರ್ಷಗಳಿಗೆ ಹೋಲಿಸಿದಲ್ಲಿ ಈ ಬೇಸಿಗೆಯಲ್ಲಿ ಬಾವಿಯಲ್ಲಿ ನೀರಿನ ಸಂಗ್ರಹ ಹೆಚ್ಚಿದೆ. ಎಲ್ಲರೂ ಹೀಗೆ ಮಾಡಿದಲ್ಲಿ ನೀರಿಗೆ ಬರಗಾಲ ಬಾರದು ಎನ್ನುತ್ತಾರೆ ಅವರ ಪತಿ ಶೇಷು. ಪತಿ ಪತ್ನಿಯರಿಬ್ಬರೂ ತಮ್ಮ ಸ್ನೇಹಿತರಿಗೆ, ಬಂಧುಗಳಿಗೆ ಮಳೆ ನೀರು ಕೊಯ್ಲು ಮಾಡುವ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ.